C.C.355/2017 CW-07/PW-02

# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ದಾಂಡೇಲಿ

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 355/2017

**ಚಾ.ಸಾ-7 ಪ್ರಾ.ಸಾ - 2**

**ಸಾಕ್ಷಿಗೆ ದಿನಾಂಕ 13-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಸೈಯದ್ ಗೌಸ ತಂಃ ಸೈಯದ ಹುಸೇನ್ ಅಂಕೋಲೆಕರ್ |
| ವಯಸ್ಸು | ಃ 36 ವರ್ಷ |
| ಉದ್ಯೋಗ | ಃ ಕೂಲಿ ಕೆಲಸ |
| ವಾಸಸ್ಥಳ | ಃ ದಾಂಡೇಲಿ |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಮೃತ ಮಹ್ಮದ ಸಾಧಿಕ್ ರವರ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ರವರು ನನಗೆ ಗೊತ್ತು. ದಿಃ 07-06-2017 ರಂದು ಸಂಜೆ 07-00 ರಿಂದ 07-30 ರ ಸಮಯದಲ್ಲಿ ಅಂಬೆವಾಡಿಯ ಪರ್ನಿಚರ್ ಅಂಗಡಿಯ ಹತ್ತಿರ ನಾನು ನಡೆದುಕೊಂಡು ಹೋಗುವಾಗ, ಅಲ್ಲಿ ಒಂದು ಲಾರಿ ಮತ್ತು ಒಂದು ಬೈಕ್ ನ ನಡುವೆ ಅಪಘಾತವಾಗಿರುತ್ತದೆ. ಅಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದನು. ಅಲ್ಲಿಯೇ ಇದ್ದ ಚಾಸಾ-1 ರವರು ನನ್ನನ್ನು ಕರೆದು, ಸದರಿ ಮೃತಪಟ್ಟ ವ್ಯಕ್ತಿಯನ್ನು ಅಂಬ್ಯುಲೇನ್ಸ ಮೂಲಕ ಸೇರಿಸಲು ಸಹಾಯ ಮಾಡಿರುತ್ತೇನೆ.
2. ನಾನು ಸದರಿ ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಹಾಗೂ ಸದರಿ ಅಪಘಾತ ಯಾವಾಗ, ಯಾರ ತಪ್ಪಿನಿಂದ ಮತ್ತು ಯಾವ ರೀತಿ ಆಗಿರುತ್ತದೆ ಎಂದು ನೋಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ.

**(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಅನುಮತಿಸಲಾಯಿತು)**

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ** .

3. ದಿಃ 07-06-2016 ರಂದು ಸಂಜೆ 07-40 ರ ಸಮಯದಲ್ಲಿ ನಾನು ನಡೆದುಕೊಂಡು ಹೋಗುವಾಗ, ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನು ಲಾರಿ ನಂಃ ಕೆಎ-01/ಎ-899 ನೇದನ್ನು ಅತೀ ವೇಗ ಮತ್ತು ಅಜಾಗೂರುಕತೆಯಿಂದ ಚಲಾಯಿಸಿಕೊಂಡು ಬಂದು, ಪರ್ನಿಚರ್ ಅಂಗಡಿಯ ಮುಂದೆ ಬರ್ಚಿ ಕಡೆಗೆ ಹೋಗಲು ಮೃತ ಮಹ್ಮದ ಸಾಧಿಕ್ ನು ತನ್ನ ದ್ವಿ ಚಕ್ರ ವಾಹನ ನಂಃ ಕೆಎ-31/ಕ್ಯೂ-9273 ನೇದರಲ್ಲಿ ಹೋಗುತ್ತಿರುವಾಗ, ಡಿಕ್ಕಿ ಪಡಿಸಿ ಅಪಘಾತಪಡಿಸಿದ್ದರಿಂದ ಸದರಿ ಅಪಘಾತವಾಗಿದೆ ಎಂದರೆ ಸರಿಯಲ್ಲ.

4. ಸದರಿ ಅಪಘಾತಕ್ಕೆ ಆರೋಪಿತನು ಸಾರ್ವಜನಿಕ ಸ್ಥಳದಲ್ಲಿ ನಿರ್ಲಕ್ಷ್ಯತನ ಮತ್ತು ಅಜಾಗೂರಕತೆಯ ಲಾರಿಯ ಚಾಲನೆಯೇ ಕಾರಣವಾಗಿದೆಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು, ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಅಪಘಾವಾಗಿತ್ತು ಎಂದು ನುಡಿಯುತ್ತಾರೆ.

5. ನಾನು ಅಪಘಾತವವನ್ನು ಪ್ರತ್ಯಕ್ಷವಾಗಿ ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ದಿಃ 07-06-2017 ರಂದು , " ನಾನು ಈ ಮೇಲಿನ ……………… ತಿಳಿದು ಬಂದಿರುತ್ತದೆ " ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಇದೆ.**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,ದಾಂಡೇಲಿ**